# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕೋರಮಂಗಲ ಉಪ-ವಿಭಾಗದ, ಈಜೀಪುರ ವಾರ್ಡ್ ಸಂಖ್ಯೆ-148 ದಿನಾಂಕ:23-11-2020 ರಂದು ನವೆಂಬರ್-2020 ರ ವಾರ್ಡ್ ಸಮಿತಿಯಮಾಸಿಕ ಸಭೆಯ ನಡವಳಿಗಳು

ಶ್ರೀ ಅಶೋಕ್ ಡಿ.ಆರ್, ಜಂಟಿ ಆಯುಕ್ತರು (ಯಲಹಂಕ) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148ರ ರವರ ಅಧ್ಯಕ್ಷತೆಯಲ್ಲಿ ರಂಗಮಂದಿರ, ಎಸ್.ಟಿ. ಬೆಡ್, ಈಜೀಪುರದಲ್ಲಿ ದಿನಾಂಕ: 23.11.2020 ರಂದು 10.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದ ಸದಸ್ಯರು:-**

1. ಶ್ರೀ ರಾಜೇಂದ್ರ ಬಾಬು .ಎಂ (ಎಸ್.ಟಿ. ಬೆಡ್ ಪ್ರದೇಶ, RWA)
2. ಶ್ರೀ ಪ್ರಕಾಶ ರೆಡ್ಡಿ (ಎಸ್.ಟಿ. ಬೆಡ್ ಪ್ರದೇಶ, RWA)

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ಪ್ರದೀಪ್ ಕುಮಾರ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್-148 ಈಜೀಪುರ
2. ಶ್ರೀ ಸಂತೋಷ್ ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಎಂ
3. ಶ್ರೀ ಟಿ.ಎಸ್. ನಾಗಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ
4. ಶ್ರೀ ಕುಮಾರ್‌ವೇಲ್, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-148
5. ಶ್ರೀ ಮೊಹಬೂಬ್ ಖಾನ್, ಸಹಾಯಕ ಅಭಿಯಂತರರು, ಎಸ್.ಡಬ್ಲ್ಯೂಡಿ
6. ಶ್ರೀ ಎಸ್. ನವೀನ್, ಕಿರಿಯ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
7. ಶ್ರೀ ಮುತ್ತುರಾಜ್, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-148
8. ಶ್ರೀ ಟಿ. ನಾಗರಾಜ್, ತೆರಿಗೆ ನಿರೀಕ್ಷಕರು, ವಾರ್ಡ್-148

* * * * *

ಶ್ರೀ ಅಶೋಕ್ ಡಿ.ಆರ್, ಜಂಟಿ ಆಯುಕ್ತರು (ಯಲಹಂಕ) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148 ರವರು ಸಭೆಗೆ ವಿಶೇಷ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ರಾಮಲಿಂಗಾರೆಡ್ಡಿ, ಬಿ.ಟಿ.ಎಂ. ವಿಧಾನಸಭಾ ಕ್ಷೇತ್ರದ ಶಾಸಕರು ರವರನ್ನು ಮತ್ತು ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು, ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.

ಮೊದಲನೆಯದಾಗಿ ಎಸ್.ಟಿ.ಬೆಡ್ ಪ್ರದೇಶದಲ್ಲಿ ವಾರ್ಡ್ ಸಮಿತಿ ಸಭೆಯನ್ನು ನಡೆಸಲು ಅನುಮತಿ ನೀಡಿದ ನೋಡಲ್ ಅಧಿಕಾರಿ/ ಅಧ್ಯಕ್ಷರು ವಾರ್ಡ್ ಸಮಿತಿ ಸಭೆ ರವರಿಗೆ ಆ ಭಾಗದ ಸಾರ್ವಜನಿಕರು ಧನ್ಯವಾದಗಳನ್ನು ಅರ್ಪಿಸಿದರು ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ ಕುಡಿಯುವ ನೀರಿನ ಕೊಳವೆಗಳಲ್ಲಿ ಮಲಿನವಾದ ನೀರು ಸರಬರಾಜು ಆಗುತ್ತಿರುವ ಬಗ್ಗೆ ಎಸ್.ಟಿ. ಬೆಡ್ ಪ್ರದೇಶದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು ಶ್ರೀ ರಾಜೇಂದ್ರ ಬಾಬು, ಸದಸ್ಯರು ರವರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಸಭೆಯಲ್ಲಿ ಹಾಜರಾಗಿದ್ದ ಶ್ರೀ ನವೀನ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಇಲ್ಲಿ ಕೊಳವೆ ಕಾಮಗಾರಿ ನಡೆಯುತ್ತಿರುವುದರಿಂದ ನೀರು ಮಲಿನಗೊಂಡ ಕಾರಣ ಮನೆಗಳಿಗೆ ಉಚಿತವಾಗಿ (1000 ಲೀಟರ್) ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿರುವುದಾಗಿ ತಿಳಿಸಿದರು ಹಾಗೂ ಕಾಮಗಾರಿಯನ್ನು 30 ರಿಂದ 45 ದಿನಗಳ ಒಳಗಾಗಿ ಪೂರ್ಣಗೊಳಿಸುವುದಾಗಿ ಸಭೆಗೆ ಭರವಸೆ ನೀಡಿದರು.



Scanned by CamScanner

ಚಂದ್ರಾರೆಡ್ಡಿ ಬಡಾವಣೆಯ ನಿವಾಸಿಗಳು ಸುಮಾರು 300 ಅಡಿಗಳ ರಸ್ತೆಯ ಯು.ಜಿ.ಡಿ ಲೈನ್ ಅಳವಡಿಸುವ ಕಾಮಗಾರಿಯು ಬಾಕಿ ಉಳಿದಿದ್ದು, ತ್ವರಿತವಾಗಿ ಪೂರ್ಣಗೊಳಿಸಲು ಸಭೆಯನ್ನು ಕೋರಿದರು. ಈ ಬಗ್ಗೆ ಮಾನ್ಯ ಶಾಸಕರಾದ ಶ್ರೀ ರಾಮಲಿಂಗಾರೆಡ್ಡಿ ರವರು ಮಾತನಾಡಿ, ಈಗಾಗಲೇ ಈ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಇನ್ನು 1 ತಿಂಗಳ ಒಳಗಾಗಿ ಕಾಮಗಾರಿಯನ್ನು ಪ್ರಾರಂಭಿಸಿ, ಪೂರ್ಣಗೊಳಿಸಲು ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರಾದ ಶ್ರೀ ಪ್ರದೀಪ್ ಕುಮಾರ್ ರವರಿಗೆ ತಿಳಿಸಿದರು.

ಚಂದ್ರಾರೆಡ್ಡಿ ಬಡಾವಣೆಯ 2ನೇ ಮುಖ್ಯರಸ್ತೆಯಲ್ಲಿ ಮರ ಬಾಗಿಕೊಂಡಿದ್ದು, ಈಗಾಗಲೇ ಒಂದು ವರ್ಷದಿಂದ ಅರಣ್ಯ ಇಲಾಖೆ ರವರಿಗೆ ಅರ್ಜಿ ಸಲ್ಲಿಸಿದ್ದರೂ ಮರವನ್ನು ತೆರವುಗೊಳಿಸಿರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ಮಾನ್ಯ ಶಾಸಕರು ಉತ್ತರಿಸಿ, ಮರವು ಸಂಪೂರ್ಣವಾಗಿ ಒಣಗಿ ಹೋಗಿರುವುದು ಅಥವಾ ಮರವು ಸಾರ್ವಜನಿಕರಿಗೆ ಅಪಾಯವನ್ನುಂಟು ಮಾಡುವ ಸ್ಥಿತಿಯಲ್ಲಿದ್ದರೆ ಮಾತ್ರ ತೆರವುಗೊಳಿಸಲು ಕ್ರಮ ಕೈಗೊಳ್ಳಲು ಅರಣ್ಯ ಇಲಾಖೆರವರಿಗೆ ಸೂಚಿಸಿದರು

ಶ್ರೀ ಮುರುಳಿಧರ್, ನಿವಾಸಿಗಳು ಎಸ್.ಟಿ.ಬೆಡ್ ಪ್ರದೇಶ ರವರು ಮಾತನಾಡಿ, ಸೋನಿ ಜಂಕ್ಷನ್ ಸಿಗ್ನಲ್‌ನಿಂದ ಮಹಾರಾಜಾ ಸಿಗ್ನಲ್ ವರೆಗೆ 80 ಅಡಿರಸ್ತೆಯಲ್ಲಿ ಪಾದಚಾರಿ ಮಾರ್ಗ ಹಾಳಾಗಿದ್ದು, ಸುತ್ತಮುತ್ತಲಿನ ಪ್ರದೇಶದ ನಿವಾಸಿಗಳು ಪಾದಚಾರಿ ಮಾರ್ಗದಲ್ಲಿ ಸಂಚರಿಸಲು ತೊಂದರೆಯಾಗುತ್ತಿರುತ್ತದೆ. ಆದುದರಿಂದ ಪಾದಚಾರಿ ಮಾರ್ಗವನ್ನು ಪುನಃಸ್ಥಾಪಿಸಲು ಸಂಬಂಧಪಟ್ಟವರಿಗೆ ಕ್ರಮ ಕೈಗೊಳ್ಳಲು ತಿಳಿಸಿದರು.

ಶ್ರೀ ಮುರುಳಿಧರ್, ನಿವಾಸಿಗಳು ಎಸ್.ಟಿ.ಬೆಡ್ ಪ್ರದೇಶ ರವರು ಮಾತನಾಡಿ, ಹಾಲಿ ಬೃಹತ್ ನೀರುಗಾಲುವೆ ಚರಂಡಿ ಬೆಡ್‌ನಲ್ಲಿ 1.8 ಮೀ. ವ್ಯಾಸದ ಒಳಚರಂಡಿ ಕೊಳವೆಯನ್ನು ಅಳವಡಿಸುವ ಕಾಮಗಾರಿಯು ಪ್ರಗತಿಯಲ್ಲಿದ್ದು, ಸದರಿ ಕಾಮಗಾರಿಯ ಅಳವಡಿಸುತ್ತಿರುವ ಕೊಳವೆಯ (Proposed Difference in grade between sony world signal junction to Bellandur Lake) ಬಗ್ಗೆ ಮಾಹಿತಿಯನ್ನು ಕೋರಿದರು. ಈ ಬಗ್ಗೆ ಮಾನ್ಯ ಶಾಸಕರು ಸ್ಥಳದಲ್ಲಿಯೇ ಬಿ.ಡಬ್ಲ್ಯೂ.ಎಸ್.ಎಸ್.ಬಿ (ಯೋಜನೆ) ಸಹಾಯಕ ಕಾರ್ಯಪಾಲಕ ಅಭಿಯಂತರರು ರವರಿಗೆ ಕರೆ ಮಾಡಿ ಶ್ರೀ ಮುರುಳಿಧರ್ ರವರ ವಿಷಯದ ಬಗ್ಗೆ ಮಾಹಿತಿಯನ್ನು ಪಡೆದು ಸಭೆಗೆ ಸ್ಪಷ್ಟೀಕರಣ ನೀಡಿದರು.

ಎಸ್.ಟಿ. ಬೆಡ್ ಪ್ರದೇಶದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು ಶ್ರೀ ರಾಜೇಂದ್ರ ಬಾಬು ರವರು ಮಾತನಾಡಿ, ನವೀನ್ ಟೆರೆಸ್ ಮುಂಭಾಗದಲ್ಲಿ ಬೀದಿ ದೀಪದ ಕಂಬಗಳು ಇಲ್ಲದೆ ರಾತ್ರಿ ವೇಳೆಯಲ್ಲಿ ಸಾರ್ವಜನಿಕರ ಸಂಚಾರಕ್ಕೆ ದುಸ್ತರವಾಗಿದ್ದು, ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಕಂಬಗಳನ್ನು ಅಳವಡಿಸಿ, ಬೀದಿ ದೀಪಗಳನ್ನು ಅಳವಡಿಸಲು ಎಲೆಕ್ಟ್ರಿಕಲ್ ಇಂಜಿನಿಯರ್, ಬಿ.ಬಿ.ಎಂ.ಪಿ ರವರಿಗೆ ತಿಳಿಸಿದರು.

ಶ್ರೀ ಮುರುಳಿಧರ್, ನಿವಾಸಿಗಳು ಎಸ್.ಟಿ.ಬೆಡ್ ಪ್ರದೇಶ ರವರು ಮಾತನಾಡಿ, ವಸತಿ ಪ್ರದೇಶಗಳಲ್ಲಿ ಆಗಿಂದ್ದಾಗೆ ರಸ್ತೆಗಳನ್ನು ಅಗೆದು ಒಳಚರಂಡಿ, ಕುಡಿಯುವ ನೀರು ಮತ್ತು ವಿದ್ಯುತ್ ಸಂಪರ್ಕಗಳಿಗಾಗಿ ರಸ್ತೆಗಳನ್ನು ಅಗೆದು ಹಾಳುಮಾಡುತ್ತಿದ್ದು, ಆದಕಾರಣ ವಸತಿ ಪ್ರದೇಶಗಳಲ್ಲಿ ಆದಷ್ಟು ವೈಟ್‌ಟಾಪಿಂಗ್ ಕಾಮಗಾರಿಗಳನ್ನು ಕೈಗೊಳ್ಳುವಂತೆ ತಿಳಿಸಿದರು.



Scanned by CamScanner

ಎಸ್.ಟಿ. ಪ್ರದೇಶಗಳಲ್ಲಿ ಸಮರ್ಪಕವಾಗಿ Fogging ಅನ್ನು ಕೈಗೊಳ್ಳಬೇಕೆಂದು ಸ್ಥಳೀಯ ನಿವಾಸಿಗಳು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಮಾತನಾಡಿದ ಶ್ರೀ ಕುಮಾರ ವೇಲು. ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಮಾತನಾಡಿ ಮುಂದಿನ ದಿನಗಳಲ್ಲಿ ಸಮರ್ಪಕವಾಗಿ Fogging ಅನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾಗಿದ್ದ ಮಾನ್ಯ ಶಾಸಕರು ರವರಿಗೆ ಮತ್ತು ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಸದಸ್ಯ ಕಾರ್ಯದರ್ಶಿ ಮತ್ತು ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಮುಂದಿನ ಸಭೆಯಲ್ಲಿ ಅನುಷ್ಠಾನಗೊಳಿಸಿರುವ ಬಗ್ಗೆ ಮಾಹಿತಿಯನ್ನು ಒದಗಿಸಬೇಕೆಂದು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಪ್ರದೀಪ್ ಕುಮಾರ್ .ಆರ್)
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್-148 ಈಜೀಪುರ

(ಶ್ರೀ ಅಶೋಕ್ [illegible].ಆರ್)
ನೋಡಲ್ ಅಧಿಕಾರಿಗಳು
ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್-148 ಈಜೀಪುರ



Scanned by CamScanner




Scanned by CamScanner




Scanned by CamScanner




Scanned by CamScanner